## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: **370** |
| ಸದಸ್ಯರ ಹೆಸರು | :: ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | :: 21.12.2022 |
| ಉತ್ತರಿಸುವ ಸಚಿವರು | :: ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | ಹಾವೇರಿ ಜಿಲ್ಲೆ, ಹುಬ್ಬಳ್ಳಿ-ಧಾರವಾಡ, ಗದಗ ಜಿಲ್ಲೆಗಳಲ್ಲಿ ರುದ್ರಭೂಮಿಗಳು ಕಡಿಮೆ ಇದ್ದು, ಈ ಭಾಗದ ವ್ಯಾಪ್ತಿಯಲ್ಲಿರುವ ರುದ್ರಭೂಮಿಗಳ ಅಭಿವೃದ್ಧಿಯ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; | ರುದ್ರಭೂಮಿ ಅಭಿವೃದ್ಧಿಯ ಕುರಿತಂತೆ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| **ಆ)** | ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಜಿಲ್ಲೆಗಳಿಗೆ ರುದ್ರಭೂಮಿ ಅಭಿವೃದ್ಧಿ ಕುರಿತು ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ಮಾಡಲಾದ ರುದ್ರಭೂಮಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | **ಹಾವೇರಿ ಜಿಲ್ಲೆ:** ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ರುದ್ರಭೂಮಿ ಅಭಿವೃದ್ಧಿ ಕುರಿತು ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>**ಗದಗ ಜಿಲ್ಲೆ:** ಗದಗ ಜಿಲ್ಲೆಗೆ 2019-20ನೇ ಸಾಲಿನಲ್ಲಿ ಮಂಜೂರಾದ ರೂ. 5.00 ಲಕ್ಷ ಅನುದಾನವನ್ನು ಗಜೇಂದ್ರಗಡ ತಾಲ್ಲೂಕು ನಿಡಗುಂದಿಕೊಪ್ಪ ಗ್ರಾಮದ ರುದ್ರಭೂಮಿ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ. 2020-21 ಮತ್ತು 2021-22ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ.<br><br>**ಧಾರವಾಡ ಜಿಲ್ಲೆ:**<br>2020-21ನೇ ಸಾಲಿನಲ್ಲಿ ರೂ. 42,55,000/-<br>2021-22ನೇ ಸಾಲಿನಲ್ಲಿ ರೂ. 31,94,000/-<br>2022-23ನೇ ಸಾಲಿನಲ್ಲಿ ರೂ. 20,00,000/-<br>ಮೇಲಿನಂತೆ, ಜಿಲ್ಲಾ ನಗರಾಭಿವೃದ್ಧಿ ಕೋಶಕ್ಕೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು 18 ಗ್ರಾಮಗಳಲ್ಲಿ ರುದ್ರಭೂಮಿಗಳನ್ನು ಅಭಿವೃದ್ಧಿ ಮಾಡಲಾಗಿದೆ.<br><br>ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸರ್ಕಾರದ ಯೋಜನೆಗಳಾದ ಹಣಕಾಸು ಯೋಜನೆಯಡಿ ರುದ್ರಭೂಮಿಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಕ್ರಿಯಾ ಯೋಜನೆಯಡಿಯಲ್ಲಿ ಕಾಮಗಾರಿಗಳು ಅನುಮೋದನೆಯಾಗಿದ್ದು ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ. |

| ಕ್ರ. ಸಂ | ಯೋಜನೆ | ವರ್ಷ | ಕಾಮಗಾರಿ ಸಂಖ್ಯೆ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|
| 1 | 14ನೇ ಹಣಕಾಸು | 2019-20 | 7 | 147.50 |
| 2 | 15ನೇ ಹಣಕಾಸು | 2020-21 | 10 | 387.94 |
| 3 | ಎಮ್.ಜಿ.ಎನ್.ವಿ.ವೈ | 2021-22 | 1 | 175.62 |
| 4 | 15ನೇ ಹಣಕಾಸು | 2022-23 | 4 | 175.62 |
| ಒಟ್ಟು | | | 22 | 814.75 |

-2/-